## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.543/2022

**DW**:1

**ದಿನಾಂಕ 07.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಎಲ್.ಎನ್. ವಕೀಲರಿಂದ:**

ಸರ್ವೆ ನಂ.68 ಇದು ಮೂಲತಃ ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.68 ಕ್ಕೆ ಸಂಬಂಧಿಸಿದಂತೆ ಯಾರ ಯಾರ ನಡುವೆ ವಾಟ್ನಿ ಆಗಿರುತ್ತದೆ ಮತ್ತು ಎಷ್ಟನೇ ಇಸವಿಯಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಆತನ ತಂದೆಯ ತಂದೆಯಿಂದ ಬಂದಂತಹ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚಕಬಂದಿ ಪೂರ್ವಕ್ಕೆ-ಮುತ್ತಪ್ಪ ಜೇವೂರ, ಉತ್ತರಕ್ಕೆ-ಭೀರಪ್ಪ ಮ್ಯಾಗೇರಿ, ದಕ್ಷಿಣಕ್ಕೆ-ಸ್ವಾಮಣ್ಣ ಗುಗದಡ್ಡಿ, ಪಶ್ಚಿಮಕ್ಕೆ-ಹೊಲ ಇರುತ್ತದೆ.

1 ನೇ ಪ್ರತಿವಾದಿ ಮತ್ತು ಅವರ ಸಹೋದರರ ನಡುವೆ ವಾಟ್ನಿಯಾಗಿರುತ್ತದೆ ಎಂದು ನೀವು ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಅವರು ನಮಗೆ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ನಾನು ಖರೀದಿ ಪಡೆಯುವ ಪೂರ್ವದಲ್ಲಿ ಏನೆಲ್ಲಾ ವಿದ್ಯಾಮಾನಗಳು ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಾನು ಖರೀದಿ ಪಡೆಯುವ ಪೂರ್ವದಲ್ಲಿ ಏನೆಲ್ಲಾ ವಿದ್ಯಾಮಾನಗಳು ಆಗಿರುತ್ತವೆ ಎಂದು ನನ್ನ ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಬರೆಸಿಲ್ಲ. ನಾನು ಖರೀದಿ ಮಾಡುವಾಗ ದಾವಾ ಆಸ್ತಿಯ ಮಾಲೀಕರು 6 ನೇ ಪ್ರತಿವಾದಿ ಇದ್ದರು. ಸದರಿ 6 ನೇ ಪ್ರತಿವಾದಿಯು ದಾವಾ ಆಸ್ತಿಯು 5 ನೇ ಪ್ರತಿವಾದಿಯಿಂದ ಖರೀದಿ ಪಡೆದಿದ್ದರು. ಸದರಿ 6 ನೇ ಪ್ರತಿವಾದಿಯು ಖರೀದಿ ಮಾಡಿದ ಖರೀದಿ ಪತ್ರವನ್ನು ನಾನು ನೋಡಿಲ್ಲ. ಸದರಿ 6 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಖರೀದಿಗೆ ಕೊಡುವಾಗ ದಾವಾ ಆಸ್ತಿಯ ಕಬ್ಜೆಯನ್ನು ಕೊಡದೇ 1 ನೇ ಪ್ರತಿವಾದಿಯು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ನಮಗೆ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು 6 ನೇ ಪ್ರತಿವಾದಿಗೆ ಕಬ್ಜಾರಹಿತ ಖರೀದಿ ಕೊಟ್ಟಿದ್ದರು ಎಂದರೆ ಸಾಕ್ಷಿಯು 6 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಯು ಇದ್ದ ಕಾರಣ ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ 6 ನೇ ಪ್ರತಿವಾದಿಯು ಕಬ್ಜೆ ಇಲ್ಲದೇ ಇದ್ದರು ಸಹ ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

-2-

6 ನೇ ಪ್ರತಿವಾದಿಯು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದರು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರ ನೀಡದೇ ಸುಮ್ಮನೆ ನಿಂತಿರುತ್ತಾರೆ. ವಾಟ್ನಿ ಆದಾಗಿನಿಂದ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ದಾವಾ ಆಸ್ತಿಯ ಕಬ್ಜಾ

ವಹಿವಾಟನ್ನು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಕಬ್ಜಾರಹಿತ ಖರೀದಿಯನ್ನು ಪಡೆದಿದ್ದು ವಾದಿಯರ ಕಬ್ಜಾ ವಹಿವಾಟಿಗೆ ಹರತಕ್ ಮಾಡಿದ್ದರಿಂದ ಅವರು ಪೊಲೀಸ್ ಪಿರ್ಯಾದಿಯನ್ನು ನೀಡಿದ್ದರು ಎಂದರೆ ಸಾಕ್ಷಿಯು ಅವರೇ ನಮಗೆ ಹೊಡೆಯಲು ಬರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯ ಸ್ವಾಧಿನದಲ್ಲಿ ಇರುತ್ತೇನೆ ಎಂದು ತೋರಿಸಲು ಉತಾರವನ್ನು ಹಾಜರುಮಾಡಿರುತ್ತೇನೆ.

1 ನೇ ವಾದಿಯು ದುಶ್ಚಟದ ನಿಶೆಯಲ್ಲಿದ್ದಾಗ ನಾನು ಮತ್ತು 6 ನೇ ಪ್ರತಿವಾದಿಯು ಖೊಟ್ಟಿ ಖರೀದಿ ಪತ್ರಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ 4 ನೇ ಪ್ರತಿವಾದಿಯು ಯಲ್ಲೂರ್ ಸುರಗಳ್ಳಿ ಇವರ ಕಡೆಯಿಂದ ಖರೀದಿ ಮಾಡಿರುತ್ತಾರೆ, ಆದರೆ ನನಗೆ ಸರ್ವೆ ನಂಬರ ಗೊತ್ತಿಲ್ಲ. ದಾವಾ ಆಸ್ತಿಯು ಏಕತ್ರ ಕುಟುಂಬದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.